## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 357 |
| ಸದಸ್ಯರ ಹೆಸರು | : ಶ್ರೀ ಪಿ.ಎಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 19.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಶಕ್ತಿ ಯೋಜನೆ ಜಾರಿಯಾದ ದಿನದಿಂದ ಇಂದಿನವರೆಗೆ ಸರ್ಕಾರದಿಂದ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳಿಗೆ ಬಿಡುಗಡೆಯಾದ ಹಣವೆಷ್ಟು; ಬಿಡುಗಡೆಗೆ ಬಾಕಿ ಇರುವ ಹಣವೆಷ್ಟು; (ಮಾಹಿತಿಯನ್ನು ನಿಗಮವಾರು ಪ್ರತ್ಯೇಕವಾಗಿ ನೀಡುವುದು); | ಶಕ್ತಿ ಯೋಜನೆ ಜಾರಿಯಾದ ದಿನಾಂಕ:11-06-2023ರಿಂದ ದಿನಾಂಕ: 31-07-2026 ರವರೆಗೆ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಬಾಕಿ ಇರುವ ಮೊತ್ತದ ವಿವರಗಳನ್ನು "ಅನುಬಂಧ" ದಲ್ಲಿ ನೀಡಲಾಗಿದೆ.<br>ಸರ್ಕಾರದಿಂದ ಶಕ್ತಿ ಯೋಜನೆಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಸಾರಿಗೆ ನಿಗಮಗಳಿಗೆ ಸಕಾಲದಲ್ಲಿ ಮಾಹೆವಾರು ಮುಂಗಡವಾಗಿ ಬಿಡುಗಡೆಗೊಳಿಸಲಾಗುತ್ತಿದೆ.<br>ಕೊರತೆ ಮೊತ್ತವನ್ನು ಮರು ಪಾವತಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಈಗಾಗಲೇ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಸರ್ಕಾರದಿಂದ ಅನುದಾನವನ್ನು ಒದಗಿಸಿದ್ದು ಮತ್ತು ಶಕ್ತಿ ಯೋಜನೆಗೆ ಒಟ್ಟಾರೆ ಆರ್ಥಿಕ ಸಹಾಯವನ್ನು ಆಯವ್ಯಯದಲ್ಲಿ ಒದಗಿಸುತ್ತಿರುವುದಾಗಿ ತಿಳಿಸಿರುತ್ತದೆ.<br>ಮುಂದುವರೆದು, ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020 ರಿಂದ ದಿನಾಂಕ:28.02.2023 ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತವಾದ ಒಟ್ಟು ರೂ.224.05 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಟಿಡಿ 72 ಟಿಸಿಬಿ 2024 (ಭಾ-1), ದಿನಾಂಕ:07.12.2024ರಲ್ಲಿ ನಿಗಮವಾರು ಈ ಕೆಳಕಂಡಂತೆ ಸರ್ಕಾರದ ಅನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ. |
| ಆ. | ಸರ್ಕಾರದಿಂದ ಸರಿಯಾದ ಸಮಯಕ್ಕೆ ಸಂಸ್ಥೆಗಳಿಗೆ ಹಣ ಬಾರದೇ ಇರುವುದರಿಂದ ಸಾರಿಗೆ ಸಂಸ್ಥೆಗಳ ದಿನನಿತ್ಯದ ಕಾರ್ಯಗಳನ್ನು ನಿಭಾಯಿಸಲು ಹಣಕಾಸಿನ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |

**(ರೂ.ಕೋಟಿಗಳಲ್ಲಿ)**

| ಸಂಸ್ಥೆ | ಅನುದಾನ |
|---|---|
| ಕ.ರಾ.ರ.ಸಾ.ನಿಗಮ | 86.55 |
| ಬೆಂ.ಮ.ಸಾ.ಸಂಸ್ಥೆ | 50.25 |
| ವಾ.ಕ.ರ.ಸಾ.ಸಂಸ್ಥೆ | 51.50 |

| | |
|---|---|
| ಕ.ಕ.ರ.ಸಾ.ನಿಗಮ | 35.75 |
| **ಒಟ್ಟು** | **224.05** |

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಮೊತ್ತ ಪಾವತಿಸಲು ಸರ್ಕಾರದ ಖಾತರಿ/ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ರೂ.2000/- ಕೋಟಿ ಸಾಲ ಪಡೆದು ಈ ಕೆಳಕಂಡಂತೆ ನಿಗಮಗಳಿಗೆ ನೀಡಲಾಗಿದ್ದು, ಸದರಿ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಸರ್ಕಾರವೇ ಮರು ಪಾವತಿಸುತ್ತಿದೆ.

**(ರೂ. ಕೋಟಿಗಳಲ್ಲಿ)**

| **ಸಂಸ್ಥೆ/ನಿಗಮ** | **ಮೊತ್ತ** |
|---|---|
| ಕ.ರಾ.ರ.ಸಾ.ನಿಗಮ | 623.80 |
| ಬೆಂ.ಮ.ಸಾ.ಸಂಸ್ಥೆ | 589.20 |
| ವಾ.ಕ.ರ.ಸಾ.ಸಂಸ್ಥೆ | 646.00 |
| ಕ.ಕ.ರ.ಸಾ.ನಿಗಮ | 141.00 |
| **ಒಟ್ಟು** | **2000.00** |

2025-26ನೇ ಸಾಲಿನಲ್ಲಿ ಸದರಿ ರೂ.2000 ಕೋಟಿ ಸಾಲದ ಮೊತ್ತದ ಅಸಲು ಮತ್ತು ಬಡ್ಡಿ ಪಾವತಿಗಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ರೂ.452 ಕೋಟಿಗಳನ್ನು ಹಾಗೂ 2026-27ನೇ ಸಾಲಿನಲ್ಲಿ ಒಟ್ಟು ರೂ.550.00 ಕೋಟಿಗಳ ಅನುದಾನವನ್ನು ಸಹ ಒದಗಿಸಲಾಗಿದ್ದು, ಸದರಿ ಅನುದಾನವನ್ನು ತ್ರೈಮಾಸಿಕವಾರು ಬಿಡುಗಡೆಗೊಳಿಸಲಾಗುತ್ತಿದೆ.

2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ 2000 ಡೀಸಲ್ ಬಸ್‌ಗಳಿಗೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಿ ಈ ಕೆಳಕಂಡಂತೆ ನಿಗಮವಾರು ಖರೀದಿಸಲು ಕ್ರಮವಹಿಸಲಾಗುತ್ತಿದೆ.

| **ಸಂಸ್ಥೆ/ನಿಗಮ** | ಬಸ್‌ಗಳ ಸಂಖ್ಯೆ |
|---|---|
| ಕ.ರಾ.ರ.ಸಾ.ನಿಗಮ | 900 |
| ವಾ.ಕ.ರ.ಸಾ.ಸಂಸ್ಥೆ | 700 |
| ಕ.ಕ.ರ.ಸಾ.ನಿಗಮ | 400 |
| **ಒಟ್ಟು** | **2000** |

ಮುಂದುವರೆದು, 2026-27ನೇ ಸಾಲಿನಲ್ಲಿ ಆಯವ್ಯಯದಲ್ಲಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೇಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.

ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2024-25ನೇ ಸಾಲಿನಲ್ಲಿ ನಿಗಮಗಳು ಸರ್ಕಾರಕ್ಕೆ

| | | |
|---|---|---|
| | | ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.637.76 ಕೋಟಿಗಳನ್ನು ಹಾಗೂ 2025-26ನೇ ಸಾಲಿನಲ್ಲಿ ರೂ.676.02 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಿ ಪುಸ್ತಕ ಹೊಂದಾಣಿಕೆ ಮಾಡಲು ಅನುಮೋದಿಸಲಾಗಿದೆ. |
| ಇ. | ಸಂಸ್ಥೆಯ ನೌಕರರಿಗೆ 38 ತಿಂಗಳುಗಳ ಹಿಂಬಾಕಿ ವೇತನ ನೀಡದೇ ಇರುವ ಕಾರಣಕ್ಕಾಗಿ ಅವರ ಕುಟುಂಬ ನಿರ್ವಹಣೆ ಕಷ್ಟಸಾಧ್ಯವಾಗುತ್ತಿದ್ದು, ಹಿಂಬಾಕಿ ಹಣ ಬಿಡುಗಡೆಗಾಗಿ ನೌಕರರು ಮೇಲಿಂದ ಮೇಲೆ ಧರಣಿ, ಸತ್ಯಾಗ್ರಹಗಳನ್ನು ಮಾಡುತ್ತಿರುವಂತಹ ಅನಿವಾರ್ಯತೆ ಉಂಟಾಗಿದ್ದು, ಹಿಂಬಾಕಿ ವೇತನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು; (ಮಾಹಿತಿ ಒದಗಿಸುವುದು); | ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:18.02.2026ರನ್ವಯ ನಾಲ್ಕು ನಿಗಮಗಳಿಗೆ ದಿನಾಂಕ:01.01.2021 ರಿಂದ 28.02.2023 ರವರೆಗೆ ಒಟ್ಟು 26 ತಿಂಗಳ ವೇತನ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಅನುಮೋದನೆ ನೀಡಿ ಆದೇಶಿಸಿದ್ದು ಅದರಂತೆ, ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ನಾಲ್ಕು ನಿಗಮಗಳಿಗೆ ಒಟ್ಟು ರೂ.900.00 ಕೋಟಿಗಳನ್ನು ಪ್ರಾವಧಾನ ಮಾಡಿ ನಾಲ್ಕು ನಿಗಮಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023ರ, ದಿನಾಂಕ:29.04.2026 ರನ್ವಯ ರೂ.450.00 ಕೋಟಿಗಳನ್ನು ಹಾಗೂ ದಿನಾಂಕ:14.08.2026ರ ಆದೇಶದನ್ವಯ ರೂ.170.00 ಕೋಟಿಗಳನ್ನು ಬಿಡುಗಡೆ ಗೊಳಿಸಲಾಗಿರುತ್ತದೆ. |
| ಈ. | ಸಂಸ್ಥೆಯ ನೌಕರರಿಗಾಗಿ ಸಕಾಲದಲ್ಲಿ ವೇತನ ಪರಿಷ್ಕರಣೆ ಮಾಡಲು ಸರ್ಕಾರ ಆದೇಶ ಹೊರಡಿಸಿದ್ದರೂ ಕೂಡಾ ಇನ್ನೂ ಸಕಾಲದಲ್ಲಿ ವೇತನ ಪರಿಷ್ಕರಣೆ ಆಗದೇ ಇರುವ ಕಾರಣಕ್ಕೆ ನೌಕರರು ಆತಂಕಗೊಂಡಿದ್ದು, ಪರಿಷ್ಕರಣೆಯನ್ನು ಯಾವ ಕಾಲಮಿತಿಯಲ್ಲಿ ಮಾಡಲಾಗುವುದು ಎಂಬ ಮಾಹಿತಿ ನೀಡುವುದು? | ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ 1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ. ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ನಾಲ್ಕು ವರ್ಷಗಳಿಗೊಮ್ಮೆ ವೇತನವನ್ನು ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ನಿಗಮಗಳ ಆರ್ಥಿಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರದ ಅನುಮೋದನೆ ಪಡೆದು ವೇತನ ಪರಿಷ್ಕರಣೆಯನ್ನು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.<br><br>ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:12.05.2026ರಲ್ಲಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಮತ್ತು ಪೂರ್ವ ತಂಕೋ ಅಧಿಕಾರಿಗಳ/ ನೌಕರರೂ ಸೇರಿದಂತೆ ದಿನಾಂಕ:31.03.2025ರಂದು ಪಡೆಯುತ್ತಿದ್ದ ಮೂಲ ವೇತನಕ್ಕೆ ಶೇ.12.50ರಷ್ಟು ಹೆಚ್ಚಿಸಿ, ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.07.2026ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿರುತ್ತದೆ. |

ಸಂಖ್ಯೆ: ಟಿಡಿ 213 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು

ಅನುಬಂಧ-1

DETAILS OF EXPENDITURE AND RELEASES UNDER SHAKTHI SCHEME FROM 11.06.2023 TO 31.07.2026

(Amount Rs. In crs.)

| | 2023-24 (from June-23 ) | | 2024-25 | |
|---|---|---|---|---|
| CORPORATION | Releases | Balance Due | Releases | Balance Due |
| KSRTC | 1212.05 | 452.37 | 1905.20 | 495.80 |
| BMTC | 549.66 | 205.43 | 864.59 | 194.78 |
| NWKRTC | 792.23 | 283.90 | 1232.18 | 275.55 |
| KKRTC | 646.06 | 238.66 | 1013.03 | 204.32 |
| **TOTAL** | **3200.00** | **1180.36** | **5015.00** | **1170.45** |

| | 2025-26 | | 2026-27 (upto July-26) | |
|---|---|---|---|---|
| CORPORATION | Releases | Balance Due | Releases | Balance Due |
| KSRTC | 2052.01 | 891.57 | 687.09 | 343.50 |
| BMTC | 908.55 | 496.27 | 320.95 | 172.41 |
| NWKRTC | 1293.28 | 594.28 | 438.08 | 199.15 |
| KKRTC | 1046.16 | 419.25 | 343.89 | 183.71 |
| **TOTAL** | **5300.00** | **2401.37** | **1790.01** | **898.77** |

| CONSOLIDATED (Jun-23 to July-26) | | |
|---|---|---|
| CORPORATION | Releases | Balance Due |
| KSRTC | 5856.35 | 2183.24 |
| BMTC | 2643.75 | 1068.89 |
| NWKRTC | 3755.77 | 1352.88 |
| KKRTC | 3049.14 | 1045.94 |
| **TOTAL** | **15305.01** | **5650.95** |